## ಪರ್ಯಾಲೋಚನ ಪ್ರಸ್ತಾವ

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಈ ಮಸೂದೆಯ ಬಗ್ಗೆ ಕೆಲವು ಮುಖ್ಯವಾದ ಅಂಶಗಳನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ, ಕಾನೂನಿಗೆ ವಿರುದ್ಧವಾಗಿ ಮದ್ಯವನ್ನು ಆಮದು ಮಾಡಿಕೊಳ್ಳುವುದು ಅಥವಾ ರಫ್ತು ಮಾಡುವುದು ಅಥವಾ ಸಾಗಾಣಿಕೆ ಮಾಡುವುದು ತಯಾರು ಮಾಡುವುದು, ತಯಾರು ಮಾಡಿ ಸ್ವಾಧೀನದಲ್ಲಿಟ್ಟುಕೊಳ್ಳುತಕ್ಕದ್ದಕ್ಕೆ ಹೆಚ್ಚಿನ ಶಿಕ್ಷೆಯನ್ನು ಕೊಡುವುದಕ್ಕಾಗಿ ಇದರಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಈ ಕಾನೂನುಗಳನ್ನು ಇದರಲ್ಲಿ ಜೋಡಿಸಲಾಗಿದೆ. ಇದರ ಜೊತೆಗೆ ಯಾವು ಇದರೂ ರೀತಿಯ ಕಾಯಿಲೆಗಳು ಒಬ್ಬರಿಂದೊಬ್ಬರಿಗೆ ಅಂಟಬಹುದಾದ ಅಂಟುರೋಗ ಕಾಣಿಸಿಕೊಂಡಾಗ ಈ ಮದ್ಯದ ಅಂಗಡಿಗಳನ್ನು ಮುಚ್ಚತಕ್ಕ ಕಾನೂನನ್ನೂ ಇದರಲ್ಲಿ ಸೇರಿಸಿದ್ದೇವೆ. ತಪ್ಪಿತಸ್ಥರೆಂದು ಕಂಡುಬಂದರೆ ಅಂಥವರಿಗೆ ಹೆಚ್ಚಿನ ಶಿಕ್ಷೆಯನ್ನು ವಿಧಿಸತಕ್ಕ ಅಧಿಕಾರವನ್ನು ಇದರಲ್ಲಿ ಸಂಬಂಧಪಟ್ಟವರಿಗೆ ಕೊಟ್ಟಿದೆ. ಅದೇರೀತಿ ತಪ್ಪು ಮಾಡಿದವರನ್ನು ಕಾಂಪ್ರೊಮೈಸ್ ಮತ್ತು ಕಾಂಪೌಂಡ್ ಮಾಡಿಕೊಳ್ಳುವುದಕ್ಕೂ ಕೂಡ ಇದರಲ್ಲಿ ಪ್ರಾವಿಜನ್ ಮಾಡಿದ್ದೇವೆ. ಎಕ್ಸೈಸ್ ಆಫಿಸರ್‌ಗಳು ಇನ್‌ವೆಸ್ಟಿಗೇಟ್ ಮಾಡತಕ್ಕ ಅಧಿಕಾರವನ್ನು ಇದರಲ್ಲಿ ಕೊಟ್ಟಿದ್ದೇವೆ. ಮದ್ಯವನ್ನು ಸಾಗಣೆ ಮಾಡಲು ಉಪಯೋಗ ಮಾಡತಕ್ಕ ವಾಹನಗಳನ್ನು ಕಾನ್‌ಫಿಸ್ಕೇಟ್ ಮಾಡತಕ್ಕ ಅಧಿಕಾರವನ್ನು ಇದರಲ್ಲಿ ಕೊಟ್ಟಿದ್ದೇವೆ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಅಧಿಕಾರಗಳು ಕ್ರಿಮಿನಲ್ ಕೋರ್ಟ್‌ಗೆ ಇದ್ದುದನ್ನು ತೆಗೆದು ಎಕ್ಸೈಸ್ ಆಫಿಸರ್‌ಗಳಿಗೆ ಕೊಟ್ಟಿದ್ದೇವೆ. ಇದೇರೀತಿ ಇನ್ನೂ ಅನೇಕ ಅಧಿಕಾರಿಗಳು ಪ್ರೊಸೀಜರ್ ಪ್ರಕಾರ ಈ ಅಧಿಕಾರಿಗಳಿಗೆ ಇವೆ. ವಿಶೇಷವಾಗಿ ಎಲ್ಲಾತಪ್ಪಿತಸ್ಥರಿಗೂ ಹೆಚ್ಚಿನ ಶಿಕ್ಷೆಯನ್ನು ಕೊಡತಕ್ಕದ್ದು ಮತ್ತು ಶಿಕ್ಷೆಗೆ ಒಳಗಾಗಿರುವವರನ್ನು ಕಾನ್‌ಫಿಸ್ಕೇಟ್ ಮಾಡತಕ್ಕ ಸಂದರ್ಭದಲ್ಲಿ ಅಪೀಲು ಮಾಡಿಕೊಳ್ಳುವುದಕ್ಕೂ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಮತ್ತು ತಪ್ಪಿತಸ್ಥರನ್ನು ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೂ ಕೂಡ ಅಧಿಕಾರವನ್ನು ಇದರಲ್ಲಿ ಕೊಟ್ಟಿದ್ದೇವೆ.

ಆದ್ದರಿಂದ ಮಾನ್ಯ ಸಭೆಯು ಈ ಮಸೂದೆಗೆ ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. In Amendment of Section 21, in Sub-Clause (2) the words "or the prevention of the spreading of any infectious diseases" shall be inserted at the end. ನಿಮ್ಮ ಉದ್ದೇಶ ಎಷ್ಟೇ ಒಳ್ಳೆಯದಿದ್ದರೂ ಕೂಡ ಕೆಲವು ಕಾನೂನುಗಳನ್ನು ಮಿಸ್‌ಯೂಸ್ ಮಾಡಿಕೊಳ್ಳತಕ್ಕ ಸದರ್ಭವೂ ಇದೆ, provision is also proposed for closure of liquor shops in the event of out-break of infectious diseases. ಇದರಲ್ಲಿ ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳುವುದು ಒಳ್ಳೆಯದು. ಇದಕ್ಕೆ ಸಂಬಂಧಪಟ್ಟ ಡಾಕ್ಟರ್‌ಗಳು ಅಥವಾ ಡಿ. ಹೆಚ್. ಒ.ಗಳು ಇಂಥ ರೋಗ ಇಲ್ಲಿ ಹರಡಿದೆ ಎಂದು ನೋಟಿಫೈ ಮಾಡಿದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಮದ್ಯದ ಅಂಗಡಿಗಳನ್ನು ಮುಚ್ಚಿಸಲು ಕ್ರಮ ತೆಗೆದುಕೊಳ್ಳಬೇಕು. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳು ತಮಗೆ ಬೇಕಾದಂತೆ ನಡೆದುಕೊಂಡು ತಮ್ಮ ಮನಸ್ಸಿಗೆ ಬಂದಾಗ ಮದ್ಯದ ಅಂಗಡಿಗಳನ್ನು ಮುಚ್ಚಿಸಬಹುದು, ಇಲ್ಲದಿದ್ದರೆ ನಡೆಸಬಹುದು. ಇದನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ರೂಲ್ಸ್‌ನಲ್ಲಿ ಅಥವಾ ಎಕ್ಸಿಕ್ಯೂಟೀವ್ ಆರ್ಡರ್‌ನಲ್ಲಿ ಒಂದು ಕಂಡೀಷನ್‌ನ್ನು ಇಂಪೋಸ್ ಮಾಡಬೇಕು. ಆ ಏರಿಯಾದಲ್ಲಿ ಪ್ರೈಮರಿ ಹೆಲ್ತ್ ಸೆಂಟರ್‌ನ ಡಾಕ್ಟರ್‌ಗಳಾಗಲಿ ಅಥವಾ ಡಿ. ಹೆಚ್. ಒ. ಗಳಾಗಲಿ ಇಂಥಿಂಥ ಏರಿಯಾದಲ್ಲಿ ಕಾಲರ ಇದೆ ಅಥವಾ ಮಲೇರಿಯಾ ಇದೆ ಅಥವಾ ಬೇರೆ ಯಾವುದೇರೀತಿಯ ರೋಗವಿದೆಯೆಂದು ನೋಟಿಫೈ ಮಾಡಿದಮೇಲೆ ಸುಮಾರು ೧೦–೧೫ ದಿವಸವಾದರೂ ಮದ್ಯದ ಅಂಗಡಿಗಳನ್ನು ಮುಚ್ಚಬೇಕೆಂದು ಹೇಳಬೇಕು.

Here, the jurisdiction of the criminal courts is taken away from adjudicating the matters pertaining to the confiscation of the properties.

Similarly sub-clause (3) of Section 43 of the Principal Act reads :

"any receptacle, package, or covering in which anything liable to confiscation under clause (1) or clause (2); is found, and the other contents, if any, of such receptacle package covering and any animal, vehicle, vessel, draft or other conveyance used for carrying the same:

Provided that, if anything specified in clause (3) is not the property of the offender, it shall not be confiscated if the owner thereof had no reason to believe that such offence was being or was likely to be committed."

ಶ್ರೀ ಎಂ. ಮಲ್ಲಿಕಾರ್ಜುನ ಖೂರ್ಗೆ.—ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದೆ ಕಾರು, ಮೋಟಾರ್ ಸೈಕಲ್, ಸ್ಕೂಟರ್ ಲಾರಿ ಇವುಗಳನ್ನು ಕಳ್ಳಪನ ಮಾಡಿಕೊಂಡು ಹೋಗಿ ಅದರಲ್ಲಿ ಸ್ಮಗಲ್ ಮಾಡಿದಂಥ ಸಾಮಾನುಗಳನ್ನು ಒಯ್ದು ಆನಂತರ ಎಲ್ಲಿಯೋ ಬಿಟ್ಟು ಹೋಗುತ್ತಾರೆ. ಅಂಥ ಪ್ರಾಪರ್ಟಿಯನ್ನು ಕಾನ್‌ಫಿಸ್ಕೇಟ್ ಮಾಡಿದರೆ ಹೇಗೆ ? ಇದು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಡೆಯುತ್ತಿರುವ ವಿಚಾರ. ತಮ್ಮ ಕೆಲಸಕ್ಕೆ ಉಪಯೋಗಿಸಿಕೊಂಡ ಮೇಲೆ ಎಲ್ಲೋ ಕಾರನ್ನು ಬಿಟ್ಟು ಹೋಗುತ್ತಾರೆ. ಇದರಿಂದ ಕಾರಿನ ಮಾಲೀಕರಿಗೆ ಅನ್‌ನೆಸಸರಿ ಹೆರಾಸ್‌ಮೆಂಟ್ ಆಗುವುದು ಉಂಟು. ಆದ್ದರಿಂದ ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಏತಕ್ಕೆಂದರೆ ಎಲ್ಲಾದರು ಹೋದಾಗ ಕಾರು ಬಿಟ್ಟು ಹೋಗುತ್ತೇವೆ. ಕಾರಿನ ಕೀಯನ್ನು ಮರೆತು ಅಲ್ಲೇ ಬಿಟ್ಟು ಹೋದಾಗ ಕಳ್ಳತನವಾಯಿತೆಂದರೆ ನನ್ನ ಕಾರು ಹೋಯಿತು ಮತ್ತು ನನಗೆ ಅನ್‌ನೆಸಸರಿ ಅಲೆದಾಟವು ಆಗುತ್ತದೆ. ಆದ್ದರಿಂದ ಈ ತೊಂದರೆಯನ್ನು ತಪ್ಪಿಸುವುದಕ್ಕೋಸ್ಕರವಾಗಿ ಯಾವ ಪ್ರಾವಿಷನ್ ಮಾಡುತ್ತೀರಿ ಸ್ಪೆಸಿಫಿಕ್ ಆಗಿ ಕ್ಲಾರಿಫಿಕೇಷನ್ ಕೊಟ್ಟರೆ ಒಳ್ಳೆಯದಾಗುತ್ತದೆ.

ಪ್ರೊ!! ಎ. ಲಕ್ಷ್ಮೀಸಾಗರ್.—ಇನ್ಫೊಸೆಂಟ್ ಪೀಪಲ್ಸ್‌ದು ಮಿಸ್‌ಯೂಸ್ ಆಗಬಾರದು, ಎಕ್ಸಿಕ್ಯುಟಿವ್ ಇನ್‌ಸ್ಟ್ರಕ್ಷನ್ ಕೊಡಿ. ಎಲ್ಲೆ Infectious disease ಇರುತ್ತದೆ, ಅಲ್ಲಿ ಸಾರ್ವಜನಿಕರಿಗೆ, ತಿಳಿಸಿದನಂತರ ಒಂದು ಕ್ರಮ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಆಗಬಹುದು. ಇದಕ್ಕೂ ನಾವು ಎಕ್ಸಿಕ್ಯುಟೀವ್ ಇನ್‌ಸ್ಟ್ರಕ್ಷನ್ ಕೊಡುತ್ತೇನೆ. ಲಿಕ್ಕರ್ ಶಾಪ್ ಕ್ಲೋಸ್ ಮಾಡುವ ಅಧಿಕಾರ ಎಕ್ಸಿಕ್ಯುಟೀವ್ ಆಕ್ಷನ್ ಪ್ರಕಾರ ಡಿಪಾರ್ಟ್‌ಮೆಂಟ್‌ನವರು ಕ್ರಮ ತೆಗೆದುಕೊಳ್ಳುವುದಕ್ಕೆ ಅಪಕಾಶವಿಲ್ಲ. ಆದಕ್ಕೊಸ್ಕರವಾಗಿ ಪ್ರತ್ಯೇಕವಾಗಿ ಸೂಚಿಸಿದ್ದೇನೆ, ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಎಕ್ಸಿಕ್ಯುಟೀವ್ ಇನ್‌ಸ್ಟ್ರಕ್ಷನ್ ಕೊಟ್ಟು ಮಿಸ್‌ಯೂಸ್ ಆಗದ ರೀತಿಯಲ್ಲಿ ಅನುಕೂಲ ಮಾಡಿ ಕೊಡೋಣ. Power is a double-edged weapon. It can hurt the man who uses it and it can also hurt the man against whom it is used. ಈ ಕ್ರಮದಲ್ಲಿ ಇಲ್‌ಲೀಗಲ್ ಟ್ರಾನ್ಸ್‌ಪೋರ್ಟೇಷನ್, ಮ್ಯಾನಫ್ಯಾಕ್ಚರ್‌ನಲ್ಲಿ ತೊಡಗಿದವರ ಮೇಲೆ ಅವರ ವಸ್ತುಗಳನ್ನು ಕಾನ್‌ಫಿಸ್ಕೇಟ್ ಮಾಡಿದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಇದನ್ನು ಸೇರಿಸಂತ್ತೀರಾ ? ಏನು ಮಾಡುತ್ತೀರೆಂದು ಕೇಳಿದ್ದಾರೆ.

For the expression raised by the Hon'ble Member, Section 43B is the complete answer :

"(1) No order confiscating any property shall be made under Section 43A unless the person from whom the same is seized,

(a) is given a notice in writing informing him the grounds on which it is proposed to confiscate such Property :

(b) is given an opportunity of making a representation in writing within such reasonable time as may be specified in the notice against the grounds of confiscation: and,

(c) is given a reasonable opportunity of being heard in the matter."

Any confiscation from any person cannot be legally taken unless the person against whom such action is taken is given a reasonable opportunity of expiaining his position, making his representation, claiming himself to be the owner or in possession of that property legally, no order can be valid. An Appeal is provided for, against that order of the officer.

SRI M. MALLIKARJUNA KHARGE —This should not become a weapon to harase the people.

PROF|| A. LAKSHMISAGAR.—All legal safeguards, are provided under the Act.

ಶ್ರೀ ಕೆ. ಹೆಚ್. ಪಾಟೀಲ್.—ಅಟಾಚ್ ಮುಂಡಲಿಕ್ಕೆ ಹೇಗೆ ವ್ಯವಸ್ಥೆ ಮಾಡಿದ್ದೀರಿ ? ಮೆಟೀರಿಯಲ್ ಯಾರಿಂದ ಬಂದಿದೆ ಎಂಬುದು ಗೊತ್ತಾಗುತ್ತದೆ. ಅಂಥ ಅಂಗಡಿಯ ಲೈಸೆನ್ಸ್ ಕ್ಯಾನ್ಸಲ್ ಮಾಡುವ ಹಾಗೆ ಮಾಡಿ.

ಪ್ರೊ|| ಎ. ಲಕ್ಷ್ಮೀಸಾಗರ್.—ಅದೆಲ್ಲ ಇದೆ.

ಶ್ರೀ ಯು. ಭೂಪತಿ.—ಇಲ್ಲೀಗಲ್ ಆಗಿ ಲಿಕ್ಕರ್ ಅನ್ನು ಇಂಪೋರ್ಟ್ ಮಾಡುವುದು, ಎಕ್ಸ್‌ಪೋರ್ಟ್ ಮಾಡುವುದು, ಟ್ರಾನ್ಸ್‌ಪೋರ್ಟ್ ಮಾಡುವ ವೆಹಿಕಲ್ಸ್ ಅನ್ನು ಕಾನ್‌ಫಿಸ್‌ಕೇಟ್ ಮಾಡುವ ಬಗ್ಗೆ ವಿರೋಧ ಇಲ್ಲ. ಯಾರೂ ತಮ್ಮ ಸ್ವಂತ ಗಾಡಿಗಳಲ್ಲಿ ಈ ಕೆಲಸವನ್ನು ಮಾಡುವುದಿಲ್ಲ. ಎಲ್ಲಾ ಕದ್ದುಕೊಂಡು ಬಂದು ಗಾಡಿಗಳಲ್ಲಿ ಪ್ರಚಾರ ಮಾಡುತ್ತಾರೆ. ಅಪೀಲಿಗೆ ಅವಕಾಶ ಇದೆ ಎಂದು ಹೇಳಿದರು; ಇದೆ ನಿಜ. ಆದರೆ ಇಲ್ಲಿ ಪ್ರಾವಿಜನ್ ಅನ್ನು ನೋಡುವಾಗ ಆಶ್ಚರ್ಯ ಅನ್ನಿಸುತ್ತದೆ. "provision is also proposed for closure of shops in the event of out-break of infectious diseases." ಮೂಲಭೂತವಾಗಿ ಮಲೇರಿಯಾ, ಕಾಲರಾ ಮುಂತಾದ ಸಾಂಕ್ರಾಮಿಕ ರೋಗಗಳು ಒಬ್ಬರಿಂದ ಒಬ್ಬರಿಗೆ ಹರಡುವ ಸಂದರ್ಭಗಳಲ್ಲಿ ಮದ್ಯಪಾನದ ಅಂಗಡಿಗಳನ್ನು ಬಂದ್ ಮಾಡುವುದಕ್ಕೆ ಅಧಿಕಾರ ಕೊಡಬೇಕೆಂದು ಹೇಳಿದ್ದೀರಿ. ಸಿಹಿ ತಿಂಡಿ ಮುಂತಾದ ಅಂಗಡಿಗಳನ್ನು ಆರೋಗ್ಯ ಇಲಾಖೆಯವರು ಬಂದ್ ಮಾಡುತ್ತಾರೆ ಬಂದ್ ಮಾಡುವುದಕ್ಕೆ ನಮ್ಮದೇನು ವಿರೋಧವಿಲ್ಲ, ಮಾಡಲಿ. ಆದರೆ ನಿಜಕ್ಕೂ ಕೂಡ ಸರ್ಕಾರ ಸರಬರಾಜು ಮಾಡುತ್ತಿರುವ ತಕ್ಕ ಮದ್ಯಪಾನ (ಜೆಂಡ, ಸಾರಾಯಿ) ಏನಿದೆ ಅದು ಹಲವಾರು ರೋಗಗಳನ್ನು ಉತ್ಪತ್ತಿ ಮಾಡುತ್ತಿದೆ ನೀವು ಸರಬರಾಜು ಮಾಡುವ ಹೆಂಡವನ್ನು ತೆಗೆದುಕೊಂಡರೆ, ಅದು ಲಕ್ಷಾಂತರ ಗಿಡಗಳಿಂದ ಉತ್ಪತ್ತಿಯಾಗುತ್ತದೆಂದು ಗಿಡಗಳನ್ನು ತೋರಿಸುವುದು. ಆದರೆ ನೀವು ಜನರಿಗೆ ಸರಬರಾಜು ಮಾಡುವ ಹೆಂಡ ಶುದ್ಧವಾಗಿರುವುದಿಲ್ಲ. ಆದರಲ್ಲಿ ರಾಸಾಯನಿಕ ವಸ್ತುಗಳನ್ನು ಬೆರೆಸಿ ಒಂದು ಸಾವಿರ ಲೀಟರ್ ಉತ್ಪತ್ತಿ ಮಾಡಿದ್ದೇವೆಂದು ತೋರಿಸಿದರೆ ನಿಜವಾಗಿ ಸರಬರಾಜಾಗಿರುವ ಸೇಂದಿ ಕೇವಲ ೧೦–೨೦–೩೦ ಸಾವಿರ ಲೀಟರ್ ಮಾತ್ರ ಆಗಿರುತ್ತದೆ. ನೀವು ಬೇಕಾದರೆ ಸರ್ವೆ ಮಾಡಿಸಿ ಗೊತ್ತಾಗುತ್ತದೆ. ತಾವೂ ಕೂಡ ಪತ್ರಿಕೆಗಳಲ್ಲಿ ಓದಿದ್ದೀರಿ. ಜನರಿಗೆ ಕರಳು ಬೇನೆ ಬಂದಿದೆ ಎಂದು ಹೇಳುತ್ತಾರೆ. ನಾನು ನೋಡಿರುವ ಪ್ರಕಾರ ಕರುಳು ಬೇನೆ ಬಂದು ವಾಂತಿ ಭೇದಿಯಾಗಿ ಸತ್ತಿರುವಷ್ಟಕ್ಕಿಂತ ಜನರನ್ನು ಮತ್ತು ವಾಂತಿ ಭೇದಿಯಿಂದ ನರಳುತ್ತಿರುವಷ್ಟಕ್ಕಿಂತ ಜನರನ್ನು ನೋಡಿದರೆ ಶೇಕಡ ೭೦ರಷ್ಟು ಜನ ಸೇಂದಿ ಕುಡಿಯುವವರಿಗೆ ಈ ಸ್ಥಿತಿ ಉಂಟಾಗಿದೆ. ಸರ್ಕಾರ ಶುದ್ಧವಾದ, ಆರೋಗ್ಯಕ್ಕೆ ಯೋಗ್ಯವಾದ ಸೇಂದಿಯನ್ನು ಸರಬರಾಜು ಮಾಡುವಷ್ಟಕ್ಕೆ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ನೀವು ಒಂದು ಕಡೆ ಸಾಂಕ್ರಾಮಿಕ ರೋಗಗಳು ಹರಡುವ ಸಂದರ್ಭದಲ್ಲಿ ಅಂಗಡಿಗಳನ್ನು ಬಂದ್ ಮಾಡಬೇಕೆಂದಿದ್ದೀರಿ. ಅದೇ ರೀತಿ ಮಾಡುತ್ತಿದ್ದೀರಿ ಈಇಲಾಖೆಯ ವ್ಯವಹಾರಗಳಲ್ಲಿ ಶಿಕ್ಕಾಬಟ್ಟೆ ಭ್ರಷ್ಟಾಚಾರ ನಡೆಯುತ್ತಿರುವಷ್ಟಕ್ಕಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ನಮ್ಮ ಊರಿನಲ್ಲಿ ಸವಿತಾ ಎಂಟರ್‌ಪ್ರೈಸಸ್ ಎಂಬ ಷಾಪನ್ನು ತೆರೆಗೆ ಕೊಟ್ಟಿಲ್ಲವೆಂದು ಸೀಜ್ ಮಾಡಿದ್ದಾರೆ. ಆದರೆ ಇವರು ಮಾಡಿರುವಷ್ಟಕ್ಕಿದ್ದು ಖಾಲಿ ರೂಂ ಅನ್ನು. ಅವರು ಅದೇ ರೂಮಿನ

ಹಿಂದುಗಡೆ ಅದೇ ಮಾಲನ್ನು ಇಟ್ಟುಕೊಂಡು ಹೆಚ್ಚಿನ ರೇಟಿಗೆ ಮಾರುತ್ತಿದ್ದಾರೆ. ಕುಡಿಯುವ ಜನರು ರೋಗ ಬಂದರೂ ಕುಡಿಯುತ್ತಾರೆ. ಒಂದು ಸಾರಿ ಕುಡಿಯುವುದನ್ನು ಕಲಿತರೆ ಬಿಡುವುದಿಲ್ಲ. ಅದನ್ನು ಬಿಡುವುದು ಕಷ್ಟದ ಕೆಲಸ. ಸಾಂಕ್ರಾಮಿಕ ರೋಗ ಬಂದ ಕಡೆ ಎಲ್ಲಿ ಅಂಗಡಿಗಳನ್ನು ಬಂದ್ ಮಾಡುತ್ತೀರಿ ಅಂಥ ಕಡೆ ಕದ್ದು ಬಿರೆ ಜಾಗಗಳಲ್ಲಿ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಾರೆ. ಆ ರೀತಿ ಮಾಡುವುದು ಮಾರಾಟಗಾರರಿಗೆ ಚೆನ್ನಾಗಿ ಗೊತ್ತಿರುತ್ತದೆ. ಈ ರೀತಿಯಾದ ಅನಾಹುತಗಳನ್ನು

೧೧.೩೦ ಎ. ಎಂ.

ಈ ರೀತಿಯಾದ ಅವ್ಯವಹಾರಗಳನ್ನು ತಡೆಯುವುದಕ್ಕೆ ಸರ್ಕಾರದ ಅಧಿಕಾರಿಗಳಿಗೆ ಆದೇಶ ಕೊಡಬೇಕು. ಈ ರೀತಿಯ ಅವ್ಯವಹಾರಿಕವಾದ ಮದ್ಯಪಾನದ ಮಾರಾಟವನ್ನು ನಿಲ್ಲಿಸಬೇಕು. ಕೆಲವರು ಅಂಗಡಿಯನ್ನು ಮುಚ್ಚಿದಂತೆ ಮಾಡಿದರೂ ಬೇರೆ ಕಡೆಯಿಂದ ಬಾಟಲ್‌ಗಳನ್ನು ಇಟ್ಟುಕೊಂಡು ಮಾರುತ್ತಾರೆ ಆದ್ದರಿಂದ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸೇಂದಿ ಮತ್ತು ಸಾರಾಯಿಯನ್ನು ಕಲಬೆರಕೆ ಮಾಡಿ ಕೊಡುತ್ತಿರುವುದರಿಂದ ಅದನ್ನು ಕುಡಿಯುತ್ತಿರುವುದರಿಂದ ರೋಗ ಬರುತ್ತಿದೆಯೇ ಇಲ್ಲವೇ ಎಂಬ ಬಗ್ಗೆ ಸರ್ವೆ ಮಾಡಿಸಿ. ಹೆಂಡ ಸಾರಾಯಿ ಕುಡಿಯತಕ್ಕ ಜಾಗದಲ್ಲಿ ೧೫–೨೦ ಗಿರಾಕಿಗಳನ್ನು ಸರ್ವೆ ಮಾಡಿ ಅದರಿಂದ ಏನೇನು ರೋಗ ಬರುತ್ತಿದೆ, ದೇಹದ ಮೇಲೆ ಏನು ಪರಿಣಾಮ ಆಗುತ್ತಿದೆ ಎಂಬ ಬಗ್ಗೆ ಸರ್ವೆ ಮಾಡಿಸಿ. ಅಥವಾ ಸಾಂಕ್ರಾಮಿಕ ರೋಗ ಇದ್ದಾಗ ಬಂದ್ ಮಾಡುತ್ತೇವೆ ಎಂದು ಹೇಳಿದರೆ ಅದಕ್ಕೂ ನಾವು ಒಪ್ಪುತ್ತೇವೆ. ಡೆಫನೆಟ್ಟಾಗಿ ಬಂದ್ ಮಾಡಬೇಕು. ಅದರಲ್ಲಿ ಅನುಮಾನವೇ ಇಲ್ಲ. ಅಡಲ್ಟ್ರೇಷನ್ ತಡೆಗಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ. ಕಾನ್‌ಫಿಸ್ಕೇಟೆಡ್ ಮದ್ಯವನ್ನು ಮಾರುವ ಅಂಗಡಿಗಳನ್ನು ಬಂದ್ ಮಾಡುವುದಕ್ಕೆ ನಮ್ಮ ಬೆಂಬಲ ಇದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪೊ॥ ಎ. ಲಕ್ಷ್ಮೀಸಾಗರ್.— (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಖಾರ್ಗೆಯವರಿಗೆ ಪೂರಕವಾಗಿ ಮೊದಲು ಉತ್ತರ ಕೊಡವುದಕ್ಕೆ ಬಯಸುತ್ತೇನೆ. ಸೆಕ್ಷನ್ ೪೩ (೩)ಯಲ್ಲಿ—

> " Order of confiscation when an offender is not known or cannot be known "

ಎಂದು ಸ್ಪೆಸಿಫಿಕ್ಕಾಗಿ ಪ್ರಾವಿಷನ್ ಮಾಡಿದ್ದೇವೆ. ಆಮೆ ಲೆ ಭೂಪತಿಯವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕಾನೂನಿನ ವಿರುದ್ಧವಾಗಿ ಸಾಗಾಣಿಕೆ ಮಾಡತಕ್ಕವರ ಮೇಲೆ ತಯಾರು ಮಾಡತಕ್ಕವರು ಮತ್ತು ಬೇರೆ ಆನೇಕ ರೀತಿಯಲ್ಲಿ ಇವುಗಳನ್ನು ಒಯ್ಯತಕ್ಕವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಅಭ್ಯಂತರ ಇಲ್ಲ ಎಂದು ಹೇಳಿ ಅದಕ್ಕೆ ಸ್ವಾಗತ ಇದೆ ಎಂದಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು ವೆ ದಲನೇ ಭಾಗ. ಎರಡನೆ ಭಾಗದ ಪ್ರಶ್ನೆಯಲ್ಲಿ ಒಳ್ಳೆಯ ಹೆಂಡ ಕೊಡಿ, ತಾಜಾ ಹೆಂಡ ಕೊಡಿ ಹುಳಿ ಹೆಂಡ ಕೊಡಿ ಎಂದು ಹೇಳಿದ್ದಾರೆ, ಆರೋಗ್ಯಕರವಾದ ಹೆಂಡ ಕೊಡಿ ಎಂದು ಹೇಳಿದ್ದಾರೆ. ಹೆಂಡ ಆಂದಮೇಲೆ ಅದು ಆರೋಗ್ಯವಾಗಿರುತ್ತದೆ ಎಂದು ನನಗನ್ನಿಸುವುದಿಲ್ಲ. ಯಾವ ವಸ್ತುವನ್ನೇ ಆಗಲಿ ಯಾವ ಪಾನೀಯವನ್ನೇ ಆಗಲಿ ಎಷ್ಟು ಪ್ರಮಾಣದಲ್ಲಿ ತೆಗೆದುಕೊಳ್ಳಬೆಕೊ ಅಷ್ಟು ಪ್ರಮಾಣದಲ್ಲಿ ತೆಗೆದುಕೊಂಡರೆ ಆರೋಗ್ಯಕರ ಎಂದು ನನ್ನ ಸ್ವಂತ ತಿಳಿವಳಿಕೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಿಮ್ಮ ತಿಳಿವಳಿಕೆ ಬಹಳ ಕಡಿಮೆ ಇದೆ. ನಿಜವಾದ ಸೇಂದಿ ಇದ್ದರೆ ಅದನ್ನು ಮಿತ ಪ್ರಮಾಣದಲ್ಲಿ ಕುಡಿದರೆ ಆರೋಗ್ಯಕ್ಕೆ ಹಾನಿಕರ ಅಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಕ್ಲೋರೋಹೈಡ್ರೇಟ್ ಮಿಕ್ಸ್ ಮಾಡಿ ನೀರನ್ನು ಸೇರಿಸಿ ಮಾಡುವ ಹೆಂಡ ಕುಡಿದರೆ ಏನಾಗುತ್ತದೆ?

ಪೊ॥ ಎ. ಲಕ್ಷ್ಮೀಸಾಗರ್.—ನಾನು ಇನ್ನೂ ಹೇಳಲೇ ಇಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿವು ಹೇಳುವ ಅರ್ಥ ಏನು?

ಪೊ॥ ಎ. ಲಕ್ಷ್ಮೀಸಾಗರ್.— ಪೂರ್ಣವಾದ ವಿಚಾರ ನಾನು ಹೇಳಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಾವು ಏನು ಒಂದು ದೊಡ್ಡ ಥಿಯರಿ ಹೇಳಿದಿರಿ ಅವನ್ನು ಸರ್ಕಾರವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಯು. ಭೂಪತಿ.—ಪೂರ್ಣವಾಗಿ ಬಂದ್ ಮಾಡಿ.

ಶ್ರೀ ಎಂ. ರಾಮಪ್ಪ.—ನಮ್ಮಲ್ಲಿ ಗಿಡಗಳು ಎಷ್ಟಿವೆ. ಆದರಿಂದ ಎಷ್ಟು ತಯಾರು ಮಾಡ ಬಹುದು, ಆದರೆ ಈಗ ಎಷ್ಟು ಮಾಡುತ್ತಿದ್ದಾರೆ ಎಂಬುದನ್ನು ಲೆಕ್ಕ ಹಾಕಿದರೆ ಗೊತ್ತಾಗುತ್ತದೆ. ಮತ್ತು ಆ ಲೆಕ್ಕಪತ್ರವನ್ನು ಸದನಕ್ಕೆ ಕೊಟ್ಟರೆ ಒಳ್ಳೆಯದು.

ಶ್ರೀ ಗೋಪಾಲ ಮಯ್ಯಂದ ಕಾನಡೆ.—ಅಧ್ಯಕ್ಷರೆ, ಕರ್ನಾಟಕದಲ್ಲಿ ಬರಗಾಲ ನೀರಿಗೆ ಬಂದಿರ ಬಹುದು. ಆದರೆ ಸೆಂದಿ, ಸಾರಾಯಿ, ಬ್ರಾಂದಿ, ವಿಸ್ಕಿ ಇದಕ್ಕೆ ಬರಗಾಲ ಬಂದಿಲ್ಲ. ಎಲ್ಲಿ ಬೇಕಾದರೂ ಅದು ಸಿಗುತ್ತದೆ. ಒಂದು ತಿಂಗಳ ಹಿಂದೆ ಬ್ರಾಂದಿ ಷಾಪ್ ಎಂದು ಇದ್ದದ್ದು ಮೊನ್ನೆ ನೋಡಿದರೆ ಹೆಸರು ಬದಲಾವಣೆ ಮಾಡಿದ್ದಾರೆ. ಬ್ರಾಂದಿ ಷಾಪ್ ಆದರೆ ೮ ಗಂಟೆಗೆ ಮುಚ್ಚಬೇಕು. ರೆಸ್ಟೋರೆಂಟ್ ಮತ್ತು ಬಾರ್ ಆದರೆ ೧೨ ಗಂಟೆಯವರೆಗೂ ಅವಕಾಶ ಇದೆ ಎಂದು ಬ್ರಾಂದಿ ಷಾಪ್ ಎಂದು ಇದ್ದುದನ್ನು ಬಾರ್ ಮತ್ತು ರೆಸ್ಟೋರೆಂಟ್ ಎಂದು ಹಾಕಿದ್ದಾರೆ. ಅದಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅಮೆಂಡ್‌ಮೆಂಟ್ ಬಗ್ಗೆ ಹೇಳಿ, ಭಾಷಣ ಬೇಡ. ಮಾನ್ಯ ಭೂಪತಿಯವರು ಹೇಗೆ ಹೇಳಿದರು ನೋಡಿ.

ಶ್ರೀ ಗೋಪಾಲ ಮಯ್ಯಂದ ಕಾನಡೆ.—ಕರ್ನಾಟಕದಲ್ಲಿ ಸೆಂದಿ ಗಿಡ ಇಲ್ಲವೇ ಇಲ್ಲ. ಇದ್ದರೂ ಸ್ವಲ್ಪ ಇರಬಹುದು. ಆದರೆ ಈಗ ಮುಂದೆ ಹುಟ್ಟುವ ಮರಗಳನ್ನೂ ಸೆರಿಸಿ ಸೆಂದಿ ತಯಾರು ಮಾಡುತ್ತಿದ್ದಾರೆ. ಒಂದು ಲೀಟರ್ ಸೆಂದಿಗೆ ೫೦೦ ಲೀಟರ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಏನು ಮಾತನಾಡುತ್ತೀರಿ?

ಶ್ರೀ ಜಿ. ಎಂ. ಕಾನಡೆ.—ಅದರ ವಿಚಾರ ಹೇಳುತ್ತೇನೆ ಆಲ್ಲಿಗೆ ಬರುತ್ತೇನೆ.

ಅಧ್ಯಕ್ಷರು.—ಮಾನ್ಯ ಖಿರ್ಗಿಯವರು ಎಷ್ಟು ಚೆನ್ನಾಗಿ ಹೇಳಿದರು ನೋಡಿ. ನೀವು ಹೊಸಬರು ಇದ್ದೀರಿ. ಅವರನ್ನು ನೋಡಿ ಕಲಿತುಕೊಳ್ಳಿ.

ಶ್ರೀ ಜಿ. ಎಂ. ಕಾನಡೆ.—ಆಲ್ಲಿಗೇ ಬರುತ್ತೇನೆ.

ಅಧ್ಯಕ್ಷರು.—ತಾವು ತಿದ್ದುಪಡಿಯನ್ನು ಓದಿದ್ದೀರಾ ?

ಶ್ರೀ ಜಿ. ಎಂ. ಕಾನಡೆ —ಆಲ್ಲಿಗೆ ಬರುತ್ತೇನೆ. ತಿದ್ದುಪಡಿಯನ್ನು ಇಂಗ್ಲೀಷ್‌ನಲ್ಲಿ ಕೊಟ್ಟಿದ್ದಾರೆ. ಯಾವುದು ಇಂಪಾರ್ಟೆಂಟ್ ವಿಷಯ ಎಂದು ಇರುತ್ತದೆಯೋ ಆ ಭಾಗವನ್ನು ನಾವು ಕೇಳುತ್ತೇವೆಂದು ಇಂಗ್ಲೀಷ್‌ನಲ್ಲೇ ಕೊಡುತ್ತಾರೆ. ಯಾವುದನ್ನು ಕನ್ನಡದಲ್ಲಿ ಕೊಟ್ಟಿದ್ದೀರಿ ಹೇಳಿ ನೋಡೋಣ. ಯಾವುದರ ಮೇಲೆ ನಾವು ಮಾತನಾಡಬೇಕು ? ಇಂತಹ ವಿಚಾರ ಬಂದಾಗಲೆಲ್ಲಾ ಇಂಗ್ಲೀಷ್‌ನಲ್ಲಿ ಕೊಡುತ್ತಿದ್ದಾರೆ. ಇವತ್ತಿನವರೆಗೆ ಯಾವ ಬಿಲ್ಲನ್ನು ಕನ್ನಡದಲ್ಲಿ ಕೊಟ್ಟಿದ್ದೀರಿ ಹೇಳಿ ನೋಡೋಣ. ನಿಮ್ಮ ಕನ್ನಡ ಕಾವಲು ಸಮಿತಿ ಏನು ಮಾಡುತ್ತದೆ ? ನಾವು ಇಲ್ಲಿ ಕನ್ನಡ ಕನ್ನಡ ಎಂದು ಒದರುತ್ತಿರುತ್ತೇವೆ. ಮೇಲೆ ಕನ್ನಡ ಇರುತ್ತದೆ, ಒಳಗಡೆಯಲ್ಲಾ ಇಂಗ್ಲೀಷ್‌ನಲ್ಲಿರುತ್ತದೆ. ಇಂಗ್ಲೀಷ್ ನಲ್ಲಿದ್ದರೆ ನಾವು ಏನು ಮಾಡಬೇಕು ? ಸೇಂದಿಯನ್ನು ಕೂಡ ಆಡಲ್ಟ್ರೇಷನ್ ಮಾಡುತ್ತಿರುವುದರಿಂದ ಕಳ್ಳಬಟ್ಟಿಯನ್ನು ಮಾಡುವುದಕ್ಕೆ ಏಕೆ ಅಪ್ಪಣೆಯನ್ನು ಕೊಡಬಾರದು ? ಅವರು ತೀರ ಹೊಳೆಯ ಹತ್ತಿರ ಹೋಗಿ ಹೆಂಡ ತೆಗೆಯುತ್ತಾರೆ. ಆದರ ಮುಂದೆ ಬೆಂಕಿ ಹಚ್ಚಿ ಹಿಡಿದರೆ ಬಗ್ ಎಂಬುದಾಗಿ ಹತ್ತಿಕೊಳ್ಳುತ್ತದೆ. ಕುಡಿದರೆ ತಲೆಯಲ್ಲಿ ಕಿಕ್ ಕೂಡ ಬರುತ್ತದೆ. ನೀವು ಕೊಡುವಂತಹ ಹೆಂಡವನ್ನು ಕುಡಿದರೆ ಕಣ್ಣು ಹಾಳಾಗುತ್ತವೆ. ಇಲ್ಲವ ರೋಗಗಳು ಬರುತ್ತವೆ. ಇಂತಹ ಹೆಂಡವನ್ನು ಕೊಟ್ಟು ಜನಗಳನ್ನು ಕೊಲೆ ಮಾಡುತ್ತೀರಿ ? ಇದನ್ನು ಮೊದಲು ಬಂದ್ ಮಾಡಿ. ಈ ಮಾತನ್ನು ನಾನು ಎರಡು-ಮೂರು ತಿಂಗಳ ಹಿಂದೆಯೇ ಹೇಳಿದ್ದೇನೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಭೂಪತಿಯವರು ವಿಶ್ಲೇಷಣೆ ಮಾಡಿದಂತಹ ಮತ್ತು ತೆಂಗಿನ ಮರದಿಂದ ಹಾಗೂ ಈಚಲ ಮರದಿಂದ ತೆಗೆಯುತಕ್ಕಂತಹ ಹೆಂಡ ಸಿಕ್ಕುವ ಪ್ರಮಾಣ ಕಡಿಮೆಯಾಗುತ್ತಿದೆ, ಕೆಲವು ರಾಸಾಯನಿಕ ಪುಡಿಯನ್ನು ನೀರಿನಲ್ಲಿ ಬೆರೆಸಿ ಅದನ್ನು ಮೂಲ ಹೆಂಡಕ್ಕೆ ಬೆರೆಸಿ ಹೆಂಡವನ್ನು ಮಾರಾಟ ಮಾಡುತ್ತಿದ್ದಾರೆ, ಇದು ಆರೋಗ್ಯಕ್ಕೆ ಕೆಟ್ಟದ್ದು ಎಂದು ಹೇಳಿದ್ದಾರೆ. ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಈ ಮಾನ್ಯ ಸಭೆಯೊಳಗೆ ಹಲವಾರು ಸಾರಿ ಪ್ರಶ್ನೆಯನ್ನು ಹಾಕಿದ್ದಾರೆ ಅದಕ್ಕೆ ಉತ್ತರವನ್ನೂ ಕೂಡ ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಅದು ಸರಿಯಾಗಿದೆ ಎಂದು ನಾನು ಹೇಳುತ್ತಿಲ್ಲ. ಇದು ಒಂದು ಭಾಗ. ಇನ್ನೊಂದು ಪ್ರಶ್ನೆಯನ್ನು

ಅವರು ಏನು ಹೇಳಿದ್ದಾರೆಂದರೆ ಹೆಂಡ-ಮದ್ಯವನ್ನು ಎಷ್ಟು ಪ್ರಮಾಣದಲ್ಲಿ ತೆಗೆದುಕೊಳ್ಳಬೇಕೋ ಅಷ್ಟನ್ನು ಮಾತ್ರ ತೆಗೆದುಕೊಂಡರೆ ಬಹುಶಃ ಆರೋಗ್ಯಕ್ಕೆ ಅನುಕೂಲ ಕರವಾಗುವುದು ಎಂಬುದನ್ನು ಹೇಳಿದ್ದನ್ನು ನಾನು ಕೇಳಿದ್ದೇನೆ ಅದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಇನ್ನೊಂದು ಭಾಗ ಏನಿದೆ ಎಂದರೆ ಇದನ್ನು ಭಾಗಶಃ ನಿಯಂತ್ರಣ ಮಾಡತಕ್ಕ ಅಧಿಕಾರ ಈ ಬಿಲ್ಲಿನಲ್ಲಿದೆ. ಪೂರ್ಣವಾಗಿ ನಿಯಂತ್ರಣ ಮಾಡತಕ್ಕಂತಹ ಅಧಿಕಾರ ಇದೆ ಎಂದು ನಾನು ಹೇಳುತ್ತಿಲ್ಲ. ಮದ್ಯ ಕಳ್ಳಬಟ್ಟಿ ಯಾವುದೇ ಆದರೂ ಯಾವ ಪ್ರಮಾಣದಲ್ಲಿ ಜನರಿಗೆ ಸಿಕ್ಕ ಬೇಕೋ ಆ ಪ್ರಮಾಣದಲ್ಲಿ ಸಿಕ್ಕದಿದ್ದರೆ ಅದನ್ನು ಕಾನ್‌ಫಿಸ್‌ಕೇಟೆಡ್ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಅವರು ಹೇಳುತ್ತಿದ್ದಾರೆ. ನೀವು ಏಕೆ ಮಧ್ಯದಲ್ಲಿ ಈ ರೀತಿ ಪ್ರವೇಶ ಮಾಡುತ್ತೀರಿ?

ಶ್ರೀ ಯು. ಭೂಪತಿ.—ಅವರು ಕುಳಿತುಕೊಂಡಿದ್ದಾರೆ. ಕಳ್ಳಬಟ್ಟಿಯನ್ನು ಸೀಜ್ ಮಾಡತಕ್ಕ ಅಧಿಕಾರ ಈ ಕಾನೂನಿನಲ್ಲಿ ಇಲ್ಲ ಎಂದು ನಾವು ಹೇಳಲೇ ಇಲ್ಲ. ಸರ್ಕಾರ ಸರಬರಾಜು ಮಾಡತಕ್ಕ ಮಧ್ಯದಲ್ಲಿ ಅಡಲ್ಟ್ರೇಷನ್ ಇದೆ. It is not fit for health. ಅಂಥದ್ದನ್ನು ಜನಗಳಿಗೆ ಕೊಟ್ಟು ಅವರಿಂದ ಜನರಿಗೆ ರೋಗ ಬರುತ್ತಾ ಇದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದು ಸರ್ಕಾರಿ ಕಳ್ಳಬಟ್ಟಿ.

ಶ್ರೀ ಯು. ಭೂಪತಿ.—ಅದನ್ನು ಹೇಗೆ ನಿಯಂತ್ರಣ ಮಾಡುತ್ತೀರಿ ?

ಅಧ್ಯಕ್ಷರು.—ಸರ್ಕಾರಿ ಅಧಿಕೃತ ಕಳ್ಳಬಟ್ಟಿ ಎಂದು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಅಕ್ಷರಶಃ ಸರಿಯಾದುದನ್ನು ಹೇಳಿದಿರಿ. ಇದನ್ನು ನಾವು ಒಪ್ಪುತ್ತೇವೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಅದಕ್ಕೆ ಉತ್ತರವನ್ನೂ ಕೊಟ್ಟಿದ್ದಾರೆ. ತಿದ್ದುಪಡಿಯಲ್ಲಿ ಅದನ್ನು ನಿಯಂತ್ರಣ ಮಾಡುವುದಕ್ಕೆ ತಪ್ಪು ಮಾಡಿದವರಿಗೆ ಹೆಚ್ಚಿನ ಶಿಕ್ಷೆಯನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಇದರಲ್ಲಿ ಮಾಡಲಾಗಿದೆ ಎನ್ನುವುದನ್ನು ಮಾತ್ರ ಸೀಮಿತವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಕಾನಡೆಯವರು ತಿದ್ದುಪಡಿಯನ್ನು ಇಂಗ್ಲೀಷ್‌ನಲ್ಲಿ ಕೊಟ್ಟಿದ್ದಾರೆ, ಕನ್ನಡದಲ್ಲಿ ಕೊಡಬೇಕು ಎಂದು ಹೇಳಿದ್ದಾರೆ. ಈ ಒಂದು ತಿದ್ದುಪಡಿ ಮಸೂದೆ ಬಗ್ಗೆ ಹೆಚ್ಚು ಹೇಳುವುದಾದರೆ, ಮೂಲ ಕಾನೂನು ಇಂಗ್ಲೀಷ್‌ನಲ್ಲಿದ್ದುದರಿಂದ ಅದರ ತಿದ್ದುಪಡಿ ಕೂಡ ಇಂಗ್ಲೀಷ್‌ನಲ್ಲೇ ಇರತಕ್ಕಂಥದ್ದು.

ಶ್ರೀ ಜಿ. ಎಂ. ಕಾನಡೆ.—ಇಂಗ್ಲೀಷ್ ತಿಳಿಯದೆ ಇದ್ದರೆ ಏನು ಮಾಡಬೇಕು. ಅದನ್ನು ನೀವು ಕನ್ನಡದಲ್ಲಿ ಬರೆದುಕೊಂಡು ಬರಬೇಕು.

ಪ್ರೊ॥ ಎ. ಲಕ್ಷ್ಮೀಸಾಗರ್.—ನನಗೆ ಅಂತಹವರ ಬಗ್ಗೆ ತುಂಬಾ ಸಹಾನುಭೂತಿ ಇದೆ. ಮೇಲಾಗಿ ಪ್ರಪ್ರಥಮವಾಗಿ ಕಾನೂನುಗಳನ್ನು ಏನು ಮಾಡುವುದಕ್ಕೆ ಹೊರಟಿದ್ದೇವೆ ಅವುಗಳೆಲ್ಲವೂ ಕನ್ನಡದಲ್ಲೇ ಇವೆ, ಎರಡನೆಯದಾಗಿ ಈಗ ಹಾಲಿ ಇರತಕ್ಕ ಎಂದರೆ ಇಂಗ್ಲೀಷ್‌ನಲ್ಲಿರತಕ್ಕ ಕಾನೂನುಗಳನ್ನು ಕನ್ನಡಕ್ಕೆ ಬಹಳ ವೇಗವಾಗಿ ತರ್ಜುಮೆ ಮಾಡತಕ್ಕ ಕೆಲಸ ಕೂಡ ಮುಂದುವರಿದಿದೆ. ಬೇರೆ ರಾಜ್ಯಗಳಿಗಿಂತಲೂ ಕೂಡ ಇಂಗ್ಲೀಷ್‌ನಲ್ಲಿರತಕ್ಕ ಕಾನೂನುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡತಕ್ಕ ಕೆಲಸ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ಆಗಿದೆ. ಅದನ್ನೂ ಕೂಡ ಬೇಗ ಮಾಡಿ ಮುಗಿಸಿ ಎಂದು ಹೇಳುತ್ತೇನೆ. ಆಗ ತಿದ್ದುಪಡಿ ಕೂಡ ಕನ್ನಡದಲ್ಲೇ ಇರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಕನ್ನಡಕ್ಕೆ ಎಲ್ಲಾ ಕಾನೂನುಗಳು ತರ್ಜುಮೆಯಾಗುವವರೆಗೂ ಶ್ರೀಮಾನ್ ಕಾನಡೆಯವರು ಸದಸ್ಯರಾಗಿರಬೇಕು.

ಪ್ರೊ॥ ಎ. ಲಕ್ಷ್ಮೀಸಾಗರ್.—ನೂರಾರು ವರ್ಷಗಳಿಂದ ಆಗತಕ್ಕ ಕಾನೂನುಗಳು ಇದನ್ನು ನಾನು ಪ್ರತಿ ೨-೩ ತಿಂಗಳಿಗೊಮ್ಮೆ ನಮ್ಮ ರಾಜ್ಯದ ಕಾನೂನುಗಳು ಎಷ್ಟು ಕನ್ನಡಕ್ಕೆ ತರ್ಜುಮೆಯಾಗಿವೆ ? ಕೇಂದ್ರದ್ದು ಎಷ್ಟು ತರ್ಜುಮೆಯಾಗಿವೆ ಎಂಬುವನ್ನು ರಿಪೋರ್ಟ್ ಮಾಡುತ್ತಿದ್ದೇನೆ. ಕೇಂದ್ರದ ಅಧಿಕಾರಿಗಳು ಬಂದು ಕೆಲಸ ಆಗುತ್ತಾ ಇದೆಯೇ, ವೇಗ ಪ್ರಗತಿಯಲ್ಲಿ ಹೋಗುತ್ತಾ ಇದೆಯೇ ಎಂದು ಪರೀಕ್ಷೆ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಕೆಲಸ ಹೆಚ್ಚು ವೇಗವಾಗಿ ಚೆನ್ನಾಗಿ ನಡೆಯುತ್ತಿದೆಯೆಂದು ಅವರೇ ಹೇಳಿದ್ದಾರೆ ಇದು ಒಂದು ದಿವಸದ ಕೆಲಸ ಅಲ್ಲ.

ಶ್ರೀ ಎಸ್. ಬಂಗಾರಪ್ಪ.—ತರ್ಜುಮೆ ಕೆಲಸ ಆಗಿ ಬರುವುದಕ್ಕೆ ೯-೧೦ ವರ್ಷಗಳು ಆಗಬಹುದು ಆ ಹೊತ್ತಿಗೆ ಕನ್ನಡದ ಕಾಪಿ ಸಪ್ಲೈ ಮಾಡಬೆ ಕಾಗಿ ಬಂದಾಗ ಇನ್ನೂ ೧೫ ವರ್ಷ ಆದಮೇಲೆ ಕೂಡಾ ನಾವು ಇಲ್ಲೇ ಇರಬೇಕಾಗುತ್ತದೆ. ಕಾನಡೆ ಕೂಡಾ ಇಲ್ಲೇ ಕೂಡಾ ಬೇಕಾಗುತ್ತದೆ ಅಲ್ಲವೇ ?

ಪ್ರೊ॥ ಎ. ಲಕ್ಷ್ಮೀಸಾಗರ್.—ಕೆಲಸ ಬೇಗ ಆಗಬೇಕು ಎನ್ನುವ ವಿಚಾರದಲ್ಲಿ ಅವರದ್ದೂ, ನಮ್ಮದೂ ವ್ಯತ್ಯಾಸ ಇಲ್ಲ. ನಾನೂ ಕೂಡಾ ಕೆಲಸ ವೇಗವಾಗಿ ಹೋಗಬೇಕೆಂದು ಹೇಳುತ್ತೇನೆ. ಇವೊತ್ತು ಆರ್ಗ್ಯಾನಿಕ್ ಗ್ರೋತ್‌ನ್ನೂ ಕೂಡಾ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಬ್ಬ ಸಣ್ಣ ಹುಡುಗನಿಗೆ ಮೂಸೆ ಬೆಳೆಯಬೇಕೆಂದರೆ ಹೇಗೆ ಸಾಧ್ಯ ? ಅವನಿಗೆ ವಯಸ್ಸು ಬಂದ ಮೇಲೆ ತಾನೇ ಚಿಗುರು ಮೂಸೆ ಬರುವುದು. ನಾವು ಇಚ್ಛಿಸಿದ ಸಮಯದಲ್ಲಿ ಆರ್ಗ್ಯಾನಿಕ್ ಗ್ರೋತ್ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕೆಲವರಿಗೆ ವಯಸ್ಸಾದರೂ ಮೂಸೆ ಬರುವುದಿಲ್ಲ.

ಪ್ರೊ॥ ಎ. ಲಕ್ಷ್ಮೀಸಾಗರ್,—ಅಂತಹವರು ಲೆಕ್ಕಕ್ಕೆ ಇಲ್ಲ.

ಶ್ರೀ ಕೆ. ಮಲ್ಲಪ್ಪ,—ಅಧ್ಯಕ್ಷರೇ ಮಾನ್ಯ ಮಂತ್ರಿಗಳು ತಿದ್ದುಪಡಿಯಲ್ಲಿ ತಪ್ಪಿತಸ್ಥರ ಮೇಲೆ ಕಾಂಪೌಂಡಿಗ್ ಫೀ ಇದೆ ಎಂದು ಹೇಳಿದರು. ಲಕ್ಷಾಂತರ ರೂಪಾಯಿಗಳನ್ನು ಮೋಸ ಮಾಡಿದವರಿಗೆ ಸಂದರ್ಭದಲ್ಲಿ ೧ ರೂಪಾಯಿ ಫೀ ಹಾಕಿದರೂ ಅದು ಕಾಂಪೌಂಡಿಂಗ್ ಫೀ ಆಗುತ್ತದೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ರಾಜಿ ಮಾಡಿಕೊಳ್ಳುವುದು ಎಲ್ಲಾ ಸಮಯದಲ್ಲೂ ಅಲ್ಲ. ಅದಕ್ಕೂ ಸೀಮಿತ ವರದಿ ಇದೆ. ಅಂಥದ್ದು ರಾಜಿ ಮಾಡಿಕೊಳ್ಳಬಹುದೇ ಹೊರತು ಮಾಡಿ ಬಾರದ್ದನ್ನು ಮಾಡಿ, ರಾಜಿ ಮಾಡಿಕೊಳ್ಳಿ ಎಂದರೆ ಅದು ಆಗುವುದಿಲ್ಲ. ಎಲ್ಲಾ ಕಾನೂನಿನಲ್ಲೇ ಇದೆ. ಅದನ್ನೇ ಇಲ್ಲೂ ಮಾಡಿದ್ದೇವೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ'' ೧೯೮೬ನೇ ಕರ್ನಾಟಕ ಅಬಕಾರಿ(ಎರಡನೆ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೫ ;—

ಅಧ್ಯಕ್ಷರು.—ಖಂಡ ೨ ರಿಂದ ೫ ರವರೆಗೆ ಎರಡೂ ಸೇರಿದಂತೆ ಈವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ರಿಂದ ೫ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೬;—

ಅಧ್ಯಕ್ಷರು.—ಈ ಖಂಡಕ್ಕೆ ಮಾನ್ಯ ಆರ್. ವೆಂಕಟರಾಮಯ್ಯನವರು ತಿದ್ದುಪಡಿಯನ್ನು ಕೊಟ್ಟಿದ್ದಾರೆ.

(ಮಾನ್ಯ ಸದಸ್ಯರು ಹಾಜರಿಲ್ಲ)

ಅಧ್ಯಕ್ಷರು.—ಖಂಡ ೬ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೬ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೭ರಿಂದ ೧೨;—

ಅಧ್ಯಕ್ಷರು.—೭ಖಂಡರಿಂದ ೧೨ರವರೆಗೆ ೬ರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೭ರಿಂದ ೧೨ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ;—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: '' ಮೊದಲನೆಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತವೆ.''

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ ದೀರ್ಘ ಶೀಷಿಟಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಪ್ರೋ॥ ಎ. ಲಕ್ಷ್ಮಿಸಾಗರ್.—೧೯೮೭ನೇ ಕರ್ನಾಟಕ ಅಬಕಾರಿ(ಎರಡನೇ ತಿದ್ದುಪಡಿ)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: ''೧೯೮೭ನೇ ಕರ್ನಾಟಕ ಅಬಕಾರಿ(ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

## ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟ (ನಿಯಂತ್ರಣ) ತಿದ್ದುಪಡಿ) ವಿಧೇಯಕ ೧೯೮೭.

ಶ್ರೀ ಕೆ. ಬಿ. ಮಲ್ಲಪ್ಪ (ನಿಯಂತ್ರಿತ ಮಾರುಕಟ್ಟೆ ಮತ್ತು ಖಿಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿ).—ಮಾನ್ಯ ಅಧ್ಯಕ್ಷರೆ, '೧೯೮೭ನೇ ಸಾಲಿನ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟ (ನಿಯಂತ್ರಣ) (ತಿದ್ದುಪಡಿ) ಕ್ಕೆ ಸಂಬಂಧಿಸಿದ ವಿಧೇಯಕವನ್ನು ಸಭೆಯು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಕೆ. ಬಿ. ಮಲ್ಲಪ್ಪ.—ಅಧ್ಯಕ್ಷರೇ, ಈ ತಿದ್ದುಪಡಿ ತಂದಿರತಕ್ಕ ಉದ್ದೇಶ ನಮ್ಮ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ, ಅವರಿಗೆ ತೊಂದರೆಯಲ್ಲಿ ಬೆಲೆಯಲ್ಲಿ ವ್ಯಾಪಾರಸ್ಥರು ಮೋಸ ಮಾಡುತ್ತಿದ್ದಾ ಮತ್ತೊಂದು ಅಭಿಪ್ರಾಯ ಏನೆಂದರೆ ಹಳ್ಳಿಗಳಲ್ಲಿ,ವ್ಯಾಪಾರ ಮಾಡುವವರು ಹೋಗಿ ಯಾವುದೇ ಸರಕು ಬತ್ತ,ರಾಗಿ,ಆಲುಗಡ್ಡೆ,ಶೇಂಗಾ ಇವುಗಳನ್ನು ಕಡಿಮೆ ಬೆಲೆಗೆ ಕೊಂಡು ಕೊಳ್ಳುವುದರ ಜೊತೆಗೆ ಮಾರು ಕಟ್ಟೆಗೆ ಭಾರತಕ್ಕೆ ಉತ್ಪಾದನೆ ಸೆಸ್ ಅನ್ನು ತಪ್ಪಿಸುತ್ತಿದ್ದಾರೆ. ಅದರ ಮೂಲಕ ಸೇಲ್ಸ್‌ಟ್ಯಾಕ್ಸ್, ಇನ್‌ಕಂಟ್ಯಾಕ್ಸ್ ಸರ್ಕಾರಕ್ಕೆ ಬರತಕ್ಕ ನೂರಾರು ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಇದನ್ನು ತಿಳಿದು ರೈತರು ಯಾವುದೇ ಸರಕನ್ನು ಮಾರುಕಟ್ಟೆಗೆ ತಂದು ವ್ಯಾಪಾರ ಮಾಡಬೇಕು. ಕೊಂಡು ಕೊಳ್ಳುವವರು ಸಹ ಮಾರುಕಟ್ಟೆಯಲ್ಲಿ ಬಂದು ಕೊಂಡು ಕೊಳ್ಳಬೇಕೆಂದು ಈ ತಿದ್ದುಪಡಿಯನ್ನು ತಂದಿದ್ದೇವೆ. ಇದು ರೈತರ ಪರವಾಗಿರತಕ್ಕ ವಿಧೇಯಕ. ಮಾನ್ಯ ಸದಸ್ಯರುಗಳೆಲ್ಲ ಇದನ್ನು ಒಪ್ಪಿ ಕೊಂಡು ಪಾಸ್ ಮಾಡಿಕೊಡ ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೊಂದು ಮಾರ್ಕೆಟ್ ಏರಿಯಾ ಏನಿದೆ ಅದರಲ್ಲಿ ಕೊಳ್ಳತಕ್ಕದ್ದು ಮಾರತಕ್ಕದ್ದು, ಅಗ್ರಿಕಲ್ಚರಲ್ ಸೊಸೈಟಿ, ರಿಟೈಲ್ ಮಾರತಕ್ಕವರಿಗೆ ನಿರ್ಬಂಧವಿಲ್ಲ. ಯಾರು ಹಳ್ಳಿಗಳಲ್ಲಿ ಹೋಗಿ ವ್ಯಾಪಾರ ಮಾಡುತ್ತಾರೆ, ಅಲ್ಲಿಂದ ಬೇರೆ ಕಡೆ ಸರಕು ಸಾಗಿಸುತ್ತಾರೆ, ಅದರಿಂದ ಮಾರ್ಕೆಟ್‌ಗೆ ಬರತಕ್ಕ ಸೆಸ್, ಸೇಲ್ಸ್‌ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ತಪ್ಪಿಸುತ್ತಿದ್ದಾರೆ ಅದನ್ನು ತಡೆಗಟ್ಟುವುದಕ್ಕೋಸ್ಕರ ಈ ವಿಧೇಯಕವನ್ನು ತಂದಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರಲ್ಲಿ ಕೆಲವೊಂದು ಸೆಕ್ಷನ್‌ಗಳಿಗೆ ಕಾಲಂಗಳಿಗೆ ತಿದ್ದುಪಡಿಯನ್ನು ತಂದಿದ್ದೇವೆ. ಈಗಾಗಲೇ ಬಿಹಾರ ಮತ್ತು ಆಂಧ್ರಪ್ರದೇಶಗಳಲ್ಲಿ ಈ ತರಹ ನಡೆಯುತ್ತಾ